R No. KRNN - 14 ಜೈ ಗೋಮಾತಾ Jai Gomata ಏಪ್ರಿಲ್ 1974 April

ಗೋರಕ್ಷಣ, ಅಹಿಂಸಾ ಪ್ರಚಾರ ಪತ್ರಿಕೆ
ಇದಕ್ಕೆ ತೆಗೆಯುವ ಧನನೆರವು ನೀಡುವವರಿಗೆ ಪ್ರಚಾರಕರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ
ವಾರ್ಷಿಕ ಅಂಚೆಮೂಲ್ಯ 80ನ್ಯೆ ಸೆ
ಸಂಸ್ಥೆಗಳಿಗೆ ರೂ. 1
ದೇಶಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ಗೋರಕ್ಷಣ
GORAKSHANA

Not even to win Swara
I renounce my princip
cow-protection. – Gandh
The meat of a cow is di
(marz), its milk is health (
its ghee is medicine (dava
– Al-Gha

Please help in every way
Humanitarian Propaganda!
Many Papers Distributed !

Office– 1067 Chamarajapuram Mysore 4

ವರ್ಷ 24 th Year

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಬಿಡಿ ಪ್ರತಿ 15 ಪೈಸೆ

Cow Slaughter should be banned Immediately

Kannada version of the Article– " Were cow-slaughter, meat-sacrifice and meat-eating prevalent in Vedic times ?
From " A Review of Beef in Ancient India "
Compiled by Syt J. Dalmiaji

ಗೋಹತ್ಯೆ, ಪ್ರಾಣಿಬಲಿ ಮತ್ತು ಮಾಂಸಾಹಾರ ವೇದಕಾಲದಲ್ಲಿ ರೂಢಿಯಲ್ಲಿತ್ತೆ ?

[ಮುಂದುವರಿದುದು]

ಬೀಜಯಜ್ಞೈಸ್ತು ಯಷ್ಟವ್ಯಮಿತಿ ವೈ ವೈದಿಕೀ ಶ್ರುತಿಃ ।
ಅಜಸಂಜ್ಞಾನಿ ಬೀಜಾನಿ ಛಾಗಂ ನೋ ಹಂತುಮರ್ಹಥ ॥

ಯಜ್ಞಗಳನ್ನು ಬೀಜಗಳಿಂದ ಮಾಡಬೇಕು, ಇದು ವೇದ ಸಂಪ್ರದಾಯ ; ಅಜ ಒಂದು ರೀತಿಯ ಬೀಜಗಳು ; ಆಡುಗಳನ್ನು ಪಥಿಸುವುದು ಸರಿಯಲ್ಲ ; ಯಜ್ಞಗಳಲ್ಲಿ ಎಲ್ಲೆಲ್ಲಿ ಪ್ರಾಣಿವಧೆ ಇವೆಯೋ ಅದು ಒಳ್ಳೆಯ ಜನರ ಮಾರ್ಗವಲ್ಲ.
(ಮಹಾಭಾರತ, ಶಾಂತಿಪರ್ವ 337–4–5 ; 324–4–5)

ಮನುಸ್ಮೃತಿಯಲ್ಲಿ ಗೋಹತ್ಯೆಯ ಅಘೋರತೆ

ಅಚಾರ್ಯಂ ಚ ಪ್ರವಕ್ತಾರಂ ಪಿತರಂ ಗುರುಮೇವ
ನ ಹಿಂಸ್ಯಾತ್ ಬ್ರಾಹ್ಮಣಾನ್ ಗಾಂಶ್ಚ ಸರ್ವಾಶ್ಚೈವ ತಪಸ್ವಿನಃ ॥
(ಮನುಸ್ಮೃತಿ 4–162)

ಉಪಾಧ್ಯಾಯ, ಶಾಸ್ತ್ರ ಪುರ್ಥಿಸುವವ, ತಂದೆ, ತಾಯಿ, ಗುರು, ಬ್ರಾಹ್ಮಣ ಗೋವು, ಯತಿ, ಇವರುಗಳನ್ನು ಎಂದು ಕೊಲ್ಲಕೂಡದು. [ಮನುಸ್ಮೃತಿ 4–162]

ಮೇಲಿನ ಶ್ಲೋಕದಲ್ಲಿ ನಿರ್ದೇಶಿಸಿರುವ ಜನರ ಕೊಲೆಯು ಗೋಹತ್ಯೆಗೆ ಸಮಾನ ಮಾಡಲಾಗಿದೆ : ಬೇರೆ ಮಾತುಗಳಲ್ಲಿ ಹೇಳುವುದಾದರೆ, ಗೋಹತ್ಯೆಯು, ಉಪಾಧ್ಯಾಯ, ಶಾಸ್ತ್ರ ಪುರ್ಥಿಕ, ತಂದೆ, ತಾಯಿ, ಗುರು, ಮತ್ತು ಬ್ರಾಹ್ಮಣನ ಕೊಲೆಗೆ ಸಮತ್ವವಾಗಿದೆ.

ಕ್ರೈಸ್ತಮತದಲ್ಲಿ ಗೋಹತ್ಯೆಯ ಅತಿನಿಂದತೆ

ಒಂದು ಎತ್ತನ್ನು ಕೊಲ್ಲುವವನು, ಒಬ್ಬ ಮನುಷ್ಯನನ್ನು ಕೊಂದಂತಾಗುವುದ
[ಇಸಾಯ 66/3]

ಇಂಗ್ಲೀಷು ನಿಘಂಟುಗಳಂತೆ " ಎತ್ತು " ಗೋವಂಶದ ಗಂಡು ಹೆಣ್ಣು ತಳಿಗೆ ಆಗಿದೆ

ಇಸ್ಲಾಂನಲ್ಲಿ ಗೋಮಾಂಸ ನಿಷೇಧ

ಅಲ್ ಘಾಜ್ಜಾಲಿ [ಕ್ರಿ ಶ. 1058–1111] ಇಸ್ಲಾಂನ ಅತ್ಯಂತ ಪ್ರಸಿದ್ಧ ಮಾನವಾದ ತತ್ವಜ್ಞಾನಿ ; ಈತನು ತನ್ನ 28 ನೇ ವಯಸ್ಸಿನಲ್ಲಿ ಬಾಗ್ದಾದಿನ ಇಸ್ಲಾಂ ಸಂಸ್ಥೆಯ ಮುಖ್ಯಸ್ಥನಾಗಿದ್ದನು. ಅತನ ಮುಖ್ಯ ಪುಸ್ತಕ " ಇಹ್ಯಾ ಉಲುಂ ಉಲ್ ದಿನ್ " (ಮತೀಯ ವಿಜ್ಞಾನದ ಪುನರ್ ಸ್ಥಾಪನೆ) ಕುರಾನಿನಷ್ಟೇ ಉನ್ನತ ಮಟ್ಟದಲ್ಲಿ ಗೌರವಿಸಲಾಗಿದೆ : ಅದರ ಉರ್ದು ಭಾಷಾಂತರವು ಲಕ್ನೋದ ನವಾಲ್ ಕಿಶೋರ್ ಪ್ರೆಸ್‌ನಲ್ಲಿ " ನೂಜಾಕುಲ್ ಅರಾಫಿ " ಎಂಬ ನಾಮಾಂಕಿತದೆಂದ ಪ್ರಕಟಿಸಲಾಗಿದೆ ; ಅದರ 195 ನೇ ಪರಿಸ್ಕರಣದಲ್ಲಿ (ಭಾಗ 2, ಪುಟ 93, ಪಂಕ್ತಿ 17–19) ಗೋಮಾಂಸದ ಹಾನಿ, ಹಸುವಿನ ತುಪ್ಪ ಹಾಲುಗಳ ದಿವ್ಯ ಗುಣಗಳನ್ನು ಈ ರೀತಿ ತಿಳಿಸಲಾಗಿದೆ—

ಗೋವಿನ ಮಾಂಸ ವ್ಯಾಧಿ, ಅದರ ಹಾಲು ಆರೋಗ್ಯ, ಅದರ ತುಪ್ಪ ಔಷಧ "

Export Earnings from Beef

★

From sri Samir Kumar Sen's Letter in Hindustan Standard

★

The Union Commerce Minister sri D P. Chattopadhyaya's plan to raise export earnings from beef is shocking. There can be no question that it is highly immoral of the Government to export beef when the Constitution [Section 48 of directive principles] wants improvement of cattle with a view to stopping cow slaughter No Government can slaughter cows unless the population as a whole decides so and asks its representatives to go against the constitution or the constitution is amended,

Mr Chattopadhyaya says that 30 million head of the cattle are useless But will he deny that the cattle sent to Tangra slaughter house at Calcutta include some fine cattle which could supply milk for many years ? The Chief Justice of the Supreme Court of India delivered from the Full Bench on 23 4–58 a judgement in which he said :

It has been found extremely difficult to enforce the regulations for inadequacy of staff a veterinary Inspectors, who succumb to the pressure or indu from the butchers, pass anim not really useless and a g animals "

Will our Minister tell us w in the non-superstitious and a totem believing State of W e Bengal the milk consumpt per head which was 3 5 oz 1947 has gone down so m that in many villages there is milk supply ?

....

Though cow protection is religious demand of the Hin World, prophets all the wo over have saluted the cow T Bible says ' He that killeth ox is as if he slew a m man (Isaiah 66-3) " T Prophet Mohammad s ' Cow's milk is the chief ca of recovery and health ; Gh is a medicine and Beef is disease Cows must not slaughtered".

Emperors like Baber, Hum ayun, Akbar- all had bann cow slaughter in their empi and Hyder Ali of Mysore ma cow slaughter punishable wi the cutting off the hands (Su reme Court Judgement 23 4 p. 9 Now Muslim States li Afghanistha have totally bann cow slaughter. — Truth

ಅಳಲು ಅಕ್ಕಂಪನದ ಅನಂದ ಸಂವತ್ಸರ

— —

ಅನಂದ ಸಂವತ್ಸರದಲ್ಲಿ ಯಮನು ಪಶುನಾಯಕನಾಗಿರುವದರಿಂದ ಪಶುಗಳಿಗೆ ಕೊಂದರೆಯುಂಟಾಗುತ್ತದೆಂದು ಪಂಚಾಂಗ ತಿಳಿಸುತ್ತದೆಂದು " ಗೋರಕ್ಷಣ " ದ ಯುಗಾದಿ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವುದನ್ನು ನೋಡಿದಾದ, ದಿಲ್ಲಿಯ ಆಂಗ್ಲಾ ವಾರಪತ್ರಿಕೆ " ಆರ್ಗನೈಜರ್ " ನ 23-3-74 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಮಾಚಾರ ಜ್ಞಾಪಕಕ್ಕೆ ಬರುತ್ತದೆ.

ಭಾರತದ ವಾಣಿಜ್ಯ ಸಚಿವ ಚಟ್ಟೋಪಾಧ್ಯಾಯರು ಕುವೈಯತ್ತಿಗೆ ಹೋಗಿದ್ದರು. ಅವರು ಅಲ್ಲಿಯ ಶೇಖ್‌ರನ್ನು ಭೇಟಿಮಾಡಿದರು ; ಅವರಿಬ್ಬರೊಳಗೆ ವಾಣಿಜ್ಯ ಸಂಬಂಧದ ಮಾತುಕತೆಗಳು ನಡೆದವು ; ಕುವೈಯತಿನಿಂದ ನಮಗೆ ಎಣ್ಣೆ ಬರಬೇಕು ; ಕುವೈಯತಿಗೆ ನಮ್ಮ ನೋಟು ಬೇಕಾಗಿಲ್ಲ ಅಲ್ಲಿಯ ಜನರು ಮುಹಮ್ಮದೀಯರು ; ಅವರಿಗೆ ಗೋಮಾಂಸ ಅಂದರೆ ಅತೀವ ಆಸೆ. ಭಾರತದ ಗೌರವ ಬಿಂದು ಗೋಮಾತೆ ಅನ್ನುವದು ಅವರಿಗೆ ಗೊತ್ತು ಹಿಂದೂಗಳಿಗೆ ಗೋಮಾತೆ ಪೂಜನೀಯ ಮಾತೆ ಇದ್ದಾಳೆ ; ಅವರಲ್ಲಿರುವ ಆ ಭಾವನೆಗೆ ಭಂಗ ಬಂದಾಗ ಅವರೂ ಒಂದು ರೀತಿಯಲ್ಲಿ ಮುಸ್ಲಿಂರಾದಂತೆಯೇ ಸರಿ.

ಇತ್ತ ವಾಣಿಜ್ಯ ಮಂತ್ರಿಯವರು ಬಹಳ ಯೋಚಿಸಿದರು ನಮ್ಮ ಹತ್ತಿರ ಕೊಡಲಿಕ್ಕೆ ಏನಿದೆ ? ಬುರುಡೆ ಬಿಟ್ಟರೆ ಬೇರೇನಿದೆ ? ಕುವ್ಯಾಯಿತಿನವರಿಗೆ ಬುರುಡೆ ಬೇಕಿಲ್ಲ ಅವರ ಕಣ್ಣಿದುರಿಗೆ ಬಂದದ್ದು ಭಾರತದ ರಸ್ತೆಗಳಲ್ಲಿ "ಅಲೆದಾಡುತ್ತಿರುವ ನಿಷ್ಪ್ರಯೋಜಕ ಪಶುಹಿಂಡು". ಅವರ ವಾಣಿಜ್ಯ ದೃಷ್ಟಿಯಲ್ಲಿ ಅವು ನಿಷ್ಪ್ರಯೋಜಕ ! ಅಂತಹ ನಿಷ್ಪ್ರಯೋಜಕ ವಸ್ತುಗಳನ್ನು ಕೊಟ್ಟು ಪ್ರಯೋಜನಕ್ಕೆ ಬರುವ ತೈಲ ತೆಗೆದುಕೊಂಡಲ್ಲಿ ! ಎತ್ತಿನ ಗಾಡಿಯ ಕಾಲ ಹೋಗಿ ತೈಲಶಕಟ ಕಾಲಕ್ಕೆ ಪ್ರಗತಿ ಹೊಂದಿದಂತಾಗುತ್ತದೆಂದುಕೊಂಡು ವ್ಯಾಪಾರ ಕುದುರಿಸಿಕೊಂಡರು. ಕುವ್ಯಾಯಿತ್ ನಮಗೆ ಎಣ್ಣೆ ಒದಗಿಸಬೇಕು, ನಾವು ಅವರಿಗೆ ಗೋಮಾಂಸ ಸರಬರಾಜು ಮಾಡಬೇಕು. ಶೇಖ್‌ರವರು ಸಂತೋಷದಿಂದ ಒಪ್ಪಿಕೊಂಡರು. ಚಟ್ಟೋಪಾಧ್ಯಾಯರು ತಮ್ಮ ವಾಣಿಜ್ಯ ನೈಪುಣ್ಯತೆಗೆ ತಾವೇ ಪ್ರಶಂಸಿಸಿಕೊಂಡರು ; ಇಂತ ವ್ಯಾಪಾರವನ್ನು ಇದುವರೆಗೂ ಅದ್ಯಾರೂ ಕುದುರಿಸಲಿಲ್ಲವೆಂಬುದೇ ಅವರ ಹೆಗ್ಗಳಿಕೆ.

ಇದರಿಂದ ಅಳಲುಗಳಿಗೆ ಅನಂದ ಸಂವತ್ಸರ ಭಯಾನಕ ಸಂವತ್ಸರ ವೆಂಬುದರ ಸೂಚನೆ ಕಂಡುಬಂದಿದೆ ಯೆಂಬುದು ಸ್ಪಷ್ಟವಾಗಿರುತ್ತದೆ. ಹೀಗಿದ್ದರೂ ಹಿಂದೂ ವನ್ನು ವಂಚಿಸುವುದಕ್ಕಾಗಿ ಗೋಸಮಿತಿಯ ಹೆಸರನ್ನು ಹೇಳಲಾಗುತ್ತಿದೆ.

ದೇಶದ ಗೌರವ ಇವರಿಗೆ ಬೇಕಾಗಿಲ್ಲ. ತಮ್ಮ ಕಾರೋಡಲು ಎಣ್ಣೆ ಬೇಕು. ಅದಕ್ಕಾಗಿ ಇಂದು ಗೋಮಾತೆ....ನಾಳೆ ಮಾತೆ....ಪ್ರಯೋಜನಕ್ಕೆ ಬಾರದ ಮುದಿ ತಾಯಿ..... ತೈಲವೆದುಂಗೆ ನಿಕೃಷ್ಟ ! ಇಂತಹ ಕಪ್ಪು ! — ಶಿವಶಂಕರ

—

ಕುಕ್ಕುಟಾಹಾರಿ—ಯೂರೋಪೀಯ ದೇಶ ಧರ್ಮದೆಡೆಗೆ !
ಮತ್ತೆ ಭಾರತ ಯಾವ ಕಡೆಗೆ ?

(ಶ್ರೀ ಮಹೇಶ್ವರದತ್ತ ಶರ್ಮರ ಹಿಂದಿ ಲೇಖನದ ಅನುವಾದ ವೆನಮೂ ರಿಂದ)

[ಮುಂದುವರಿದುದು]

ಏರೋಪ್ಯ ದೇಶಗಳಲ್ಲಿ ರಾಷ್ಟ್ರದ ಏಕತೆಯ ನಿರ್ಮಾಣವು ರಾಜನೈತಿಕ ವಿಚಾರಗಳ ಮೇಲೆ ಆಧಾರಿತವಾಗಿರುತ್ತದೆ. ಕಿಂತು, ಭಾರತದ ಏಕತೆಯು ಮೂಲತಃ ಧಾರ್ಮಿಕ ಆದರ್ಶಗಳ ಮೇಲೆ ಪ್ರತಿಷ್ಠಿತವಾಗಿರುತ್ತದೆ. ಅನಾದಿ ಕಾಲದಿಂದ ಪ್ರಚಲಿತವಾಗಿ ಬಂದಿರುವ ವೇದದಲ್ಲಿ ಬೇರೂರಿದ ಸನಾತನಧರ್ಮವು ಅತ್ಯಂತ ವಿಶಾಲ; ವ್ಯಾಪಕ, ಮಹಾನ್ ಮತ್ತು ಉದಾರವಾದುದು. ಜಾತಿ ಸಂಕರ ಮತ್ತು ಧರ್ಮಾತಿಕ್ರಮಣವಾದಾಗ, ಸಮಾಜದಲ್ಲಿ ಪಾಪ, ಅತ್ಯಾಚಾರ ಮತ್ತು ಕ್ರೂರತೆಗಳ ಸಾಮ್ರಾಜ್ಯ ವ್ಯಾಪ್ತನಾಗುತ್ತವೆ ತಾಮಸಿಕ ಶಕ್ತಿಗಳು ಪ್ರಚಂಡ ರೂಪ ಧರಿಸಿ ಸಮಾಜವನ್ನು ಕುಕರ್ಮ ಮತ್ತು ದುರಾಚಾರದ ಕಡೆಗೆ ಪ್ರೇರೇಪಿಸುತ್ತವೆ ; ಇದರಿಂದ ಸಮಾಜವು ಪಥಭ್ರಷ್ಟವಾಗುತ್ತದೆ ; ಈ ಸ್ಥಿತಿಯು ಈಗ ಪ್ರತ್ಯಕ್ಷ ಕಂಡುಬರುತ್ತಿರುವುದು.

ಇಲ್ಲಿ, ಭಾರತದಲ್ಲಿ ಶಾಸನಾರೂಢ ಮಂತ್ರಿಗಣಗಳ ಪೊಟ್ಟೆ, ವಿಮಾನು ಮತ್ತು ಮಾಂಸಾಹಾರಗಳ ಪ್ರಚಾರ ಖುಲ್ಲಾಮಖುಲ್ಲಾ ಮಾಡುತ್ತಿದ್ದಾರ್ಗ್ಯೂ, ಭಾರತದ ಆದರ್ಶ ಧರ್ಮದ ವಿಶೇಷತೆಯ ಕಾರಣ ಇಂದು ಯೂರೋಪೀಯ ದೇಶಗಳಲ್ಲಿ ಮಂದಿರಗಳು ನಿರ್ಮಾಣವಾಗುತ್ತಿರುವವು, ಮತ್ತು " ಹರೇ ಕೃಷ್ಣ, ಹರೇ ರಾಮ " ನಾಮ ಮಾತ್ರವು ಮಂತ್ರವು ಉಚ್ಚರಿಸಲಾಗುತ್ತಿರುವುದು ; ಹ್ಯಾಗೂ ಅಲ್ಲಿ ಜೂಜಾಟವೂ ಮದ್ಯವು ವಿಮಾನು ಮಾಂಸ ಮೊಟ್ಟೆಗಳನ್ನು ತಿನ್ನುವುದು ವರ್ಜಿತವಾಗುತ್ತಿರುವುದು ಕೆಲವರು ಸ್ವಾತ್ವಿಕ ಜೀವನದ ಕಡೆ ನಡೆಯುತ್ತಿರುವರು.

ನತ್ಥ ಮತ್ತು ಅಹಿಂಸೆ

(ಮಹಾತ್ಮಾಗಾಂಧಿಯವರ ಸಂದೇಶ – ಲೇ ; ಶ್ರೀ ಯು.ಎಸ್. ಮೋಹನರಾವ್)

ನಾನು ಈಗೆದ 50 ವರ್ಷಗಳಿಂದ ಸತತವಾಗಿ, ನಿಷ್ಕಪಟವಾಗಿ ಅಹಿಂಸೆಯನ್ನು ಆಚರಿಸಿಕೊಂಡು ಬಂದಿರುತ್ತೇನೆ ; ಗೃಹಕೃತ್ಯಗಳಲ್ಲೂ ಸಂಘಸಂಸ್ಥೆಗಳಲ್ಲೂ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲೂ ಅಹಿಂಸೆಯ ತತ್ವಗಳನ್ನು ಪರೀಕ್ಷಿಸಿ ಪ್ರಯೋಗಿಸಿದ್ದೇನೆ ; ನನ್ನ ಈ ಪ್ರಯೋಗಗಳಲ್ಲಿ ಯಾವದೂ ವಿಫಲವಾಗಿಲ್ಲ ; ನನ್ನ ಈ ಪ್ರಯೋಗದಲ್ಲಿ ಯಾವದಾದರೂ ಸಫಲಗೊಂಡಿದ್ದರೆ, ಅದಕ್ಕೆ ನನ್ನ ಅಪೂರ್ಣ ಸಾಧನೆಯೇ ಕಾರಣನೆಂದು ಮನಗೊಂಡಿದ್ದೇನೆ ; ನಾನು ಎಲ್ಲದರಲ್ಲಿಯೂ ಪರಿಪೂರ್ಣನಾಗಿ ಹೇಳಿಕೊಳ್ಳುವುದಿಲ್ಲ ; ಆದರೆ ನಾನು ಸತ್ಯದ ಅನ್ವೇಷಣದಲ್ಲಿ, ದೇವರನ್ನು ಕಾಣುವ ತವಕದಲ್ಲಿ ನುನ್ನಡೆಯುತ್ತಿದ್ದೇನೆ ಎಂದು ಮಾತ್ರ ಹೇಳಿಕೊಳ್ಳುತ್ತೇನೆ ; ಸತ್ಯದ ಈ ಶೋಧನೆಯಲ್ಲಿ, ನನಗೆ ಅಹಿಂಸೆಯ ಅರಿವು ಮೂಡಿತು ; ಈ ಅಹಿಂಸೆಯನ್ನು ಪ್ರತಿಪಾದಿಸುವುದೇ ನನ್ನ ಜೀವನದ ಧ್ಯೇಯವಾಗಿದೆ ; ಈ ಧ್ಯೇಯವನ್ನು ಮುಂದುವರಿಸಿಕೊಂಡು ಬರುವದನ್ನು ಬಿಟ್ಟು ಜೀವನದಲ್ಲಿ ನನಗೆ ಇತರ ಆಸೆಯಾಗಲೀ ಆಸಕ್ತಿಯಾಗಲೀ ಇಲ್ಲ.

ಸ್ವಾರ್ಥತ್ಯಾಗದ ಪುರಾತನ ಕಟ್ಟಳೆಗಳನ್ನು ಭಾರತ ಜನರ ಮುಂದಿಡಲು ನಾನು ಪ್ರಯತ್ನಿಸುತ್ತಿದ್ದೇನೆ ; ಸತ್ಯಾಗ್ರಹ ಮತ್ತು ಅದರಿಂದ ಹುಟ್ಟಿಕೊಂಡಿರುವ ಅಸಹಕಾರ ಚಳವಳಿ ಮತ್ತು ನಾಗರೀಕ ಪ್ರತಿಭಟನೆಯು ಮತ್ತೇನೂ ಅಲ್ಲ ಸ್ವಾರ್ಥತ್ಯಾಗದ ವಿವಿಧ ಸ್ವರೂಪಗಳಾಗಿವೆ.

ಹಿಂಸೆಯಲ್ಲೂ ಸಹ ಅಹಿಂಸೆಯ ಅಂಶವಿದೆ ಎಂಬ ಅಂಶವನ್ನು ಕಂಡುಹಿಡಿದ ಋಷಿಗಳು ನ್ಯೂಮನ್‌ಗಿಂತಲೂ ಹೆಚ್ಚು ಪ್ರತಿಭಾಶಾಲಿಗಳಾಗಿದ್ದರು, ವೆಲ್ಲಿಂಗ್‌ಟನ್‌ಗಿಂತ ನುರಿತ ವೀರ ಜೋಧರಾಗಿದ್ದರು ; ಶಸ್ತ್ರಾಸ್ತ್ರಗಳ ಬಳಕೆಯನ್ನು ಅರಿತಿದ್ದ ಅವರು, ಅವುಗಳ ನಿಷ್ಪ್ರಯೋಜಕತೆಯನ್ನು ಸಹ ಅರಿತಿದ್ದರು ; ಅಹಿಂಸೆಯಿಂದ ಮಾತ್ರ ನಮಗೆ ಮೋಕ್ಷ ದೊರೆಯುವದೇ ವಿನಃ ಹಿಂಸೆಯಿಂದಲ್ಲ ಎಂಬುದನ್ನು ಈ ಋಷಿಗಳು ಬೋಧಿಸಿದರು.

ಜೀವನದ ಸಂಕಷ್ಟಗಳನ್ನು ಸಹಿಸಿಕೊಂಡಿರಲು ಅಹಿಂಸೆಯು ಒಂದು ರಚನಾತ್ಮಕವಾದ ಪ್ರೇರಕ ಶಕ್ತಿ ಯಾಗಿದೆ. ಪಾಪ ಕರ್ಮಗಳ ಮತ್ತು ಕೆಡಕು ಮಾಡುವವರ ಸ್ವೇಚ್ಛೆಗೆ ಬಾಗಿ ನಡೆಯುವುದು ಇದರ ಅರ್ಥವಲ್ಲ ; ಕ್ರೂರಿಗಳ, ದುಷ್ಟ ಜನತೆ ವಿರುದ್ಧ ನಮ್ಮ ಆತ್ಮವನ್ನೇ ಪಣವಾಗಿಡುವುದು ಇದರ ಅರ್ಥ ಈ ಕಟ್ಟಳೆಗೆ ಅನುಸಾರವಾಗಿ ನಡೆದುಕೊಂಡಲ್ಲಿ ಇಡೀ ಸಾಮ್ರಾಜ್ಯದ ವಿರುದ್ಧ ಹೋರಾಡಲು ನಮಗೆ ಸಾಧ್ಯವಾಗುತ್ತದೆ. ಈ ನಿಯಮಗಳನ್ನು ಅನುಸರಿಸಿ ನಾವು ನಮ್ಮ ಘನತೆ ಗೌರವಗಳನ್ನು, ಧಾರ್ಮಿಕ ನಂಬಿಕೆಗಳನ್ನು, ನಮ್ಮ ಆತ್ಮವನ್ನು ಕಾಪಾಡಿಕೊಂಡು, ಅನ್ಯಾಯವಾದ ಸಾಮ್ರಾಜ್ಯದ ತಳಹದಿಯನ್ನು ಅಲುಗಾಡಿಸಬಹುದಾಗಿದೆ ; ಸಾಮ್ರಾಜ್ಯ ಶಾಹಿ ಮತ್ತೆ ಅದು ತಲೆಎತ್ತದಂತೆ ಅದನ್ನು ನಿರ್ಮೂಲಗೊಳಿಸಬಹುದಾಗಿದೆ.

ಅಹಿಂಸೆಯು ಒಂದು ದುರ್ಬಲ ಸಾಧನವಾಗಿರುವುದರಿಂದ ಅದನ್ನು ಅನುಸರಿಸಬೇಕೆಂಬುದು ನನ್ನ ನಾವತಲ್ಲ ; ಭಾರತದ ಶಕ್ತಿ ಸಾಮರ್ಥ್ಯಗಳನ್ನು ಅರಿತುಕೊಂಡೇ ಅದು ಅಹಿಂಸೆಯ ಮಾರ್ಗವನ್ನು ಅನುಸರಿಸಬೇಕು ಎಂದು ನಾನು ಉಪದೇಶಿಸುತ್ತಿದ್ದೇನೆ ಭಾರತವು ತನ್ನ ಶಕ್ತಿ ಸಾಮರ್ಥ್ಯ ವನ್ನು ಅರಿತುಕೆದಳ್ಳುವುದಕ್ಕಾಗಿ ಶಸ್ತ್ರಾಸ್ತ್ರಗಳನ್ನು ಕಡೆಯಬೇಕಾಗಿಲ್ಲ ಅಥವಾ ಅವನ್ನು ಗಳಿಸಬೇಕಾಗಿಲ್ಲ.

ಭಾರತವು ತನ್ನಲ್ಲಿರುವ ಆಂತರಿಕಶಕ್ತಿಯನ್ನು ಮನಗಾಣಬೇಕು ; ತನ್ನ ಭೌತಿಕ ದುರ್ಬಲತೆಯನ್ನು ಮೆಟ್ಟಿ ನಿಂತು, ವಿಜಯೋತ್ಸಾಹದಲ್ಲಿ ಮೆರೆಯಬೇಕು ; ವಿಶ್ವದ ಭೌತಿಕ ಒತ್ತಡಗಳನ್ನು, ಪ್ರಭಾವವನ್ನು ಪ್ರತಿಭಟಿಸಿ, ಸ್ವಾವಲಂಬಿಯಾಗುವ ಶಕ್ತಿ ಭಾರತಕ್ಕಿರಬೇಕೆಂದು ನಾನು ಬಯಸುತ್ತೇನೆ.

★

FRUGALITY

If frugality were established in the state, if our expenses were laid out rather in the necessaries than the superfluities of life, there might be fewer wants, and even fewer pleasures, but infinitely more happiness.

— Goldsmith

DALMIA CEMENT (BHARAT) LIMITED

Dalmiapuram (Tamil Nadu)

Head Office: 4 Scindia House, New Delhi - 110001

ಗೋ ಧ್ಯಾ ನ

ಸತ್ಯ ಶಾಂತಿಯ ಐಕ್ಯ ಬೋಧನ
ನಿತ್ಯ ಗೋವಿನ ಜೀವನ
ಮೂಕ ರೋಧನದಿಂದ ನಾಡಿನ
ಧರ್ಮ ಕಾರ್ಯ ಸಾಧನ ॥ 1 ॥

ಹುಲ್ಲ ಮೇಯುತ ಹಾಲನೀಯುವ
ಗೋವಿನ ಜೀವನ ಪಾವನ
ನಿತ್ಯ ಗೋವಿನ ಭಜಿಸುತಿರುವನ
ಗೃಹವೇ ಸುಂದರ ನಂದನ ॥ 2 ॥

ದೇಶದೇಳ್ಗೆಗೆ ಮಾಡಿವ ಗೋವೆ
ನಿಮಗೆ ಮಾರ್ಗದರ್ಶನ
ಸ್ವಾರ್ಥಜೀವನ ನಡೆಸುತಿರುವಗೆ
ತಾಯಿ ನೀಡುವ ಬೋಧನ ॥ 3 ॥

ರಕ್ತ ಸೋರುವ ತನಕ ಬಡಿವರು
ಕ್ಷೀರ ನೀಡುವ ಜೀವನ
ವಿಷವನಿತ್ತಗೆ ಸಿಹಿಯ ನೀಡಿರಿ
ಯೆಂದು ಸಾರುವ ಬೋಧನ ॥ 4 ॥

— ಜಿ. ಗಾಂವ್ಕರ್
ಬಾಗಿನಕಟ್ಟೆ

★

ಕಾರುಣ್ಯ ಗೋವು

ಕಾರುಣ್ಯ ತೋರೊ ತಾಯೇ, ಓ ಜಗಜ್ಜನನಿ ನೀ
ಕರುಣಾಕಟಾಕ್ಷವ ತೋರು ಎನಗೆ ಓ
ಗೋಮಾತೆ ನೀ
ನಿನ್ನನು ನಂಬಿ ಬದುಕಿದರಮ್ಮಾ
ನಿನ್ನನು ಪೂಜಿಸಿ ಕೃತಾರ್ಥರಾದರಮ್ಮಾ
ಜಗದ ಮಹಿಮೆ, ನಿನ್ನ ಹಿರಿಮೆ
ಪುಣ್ಯಕೆ ನೀವೇ, ಕರುಣಾನಿಧೇ
ದರಿದ್ರ ಮಾನವಗೆ ತೋರು ತಾಯೇ
ಪರಮ ಲೀಲಾವಯೆ, ತಾಯೇ ॥

— ಗಣಪತಿ ಡಿ.ಭಟ್
ಚಿಮ್ಮಳ್ಳಿ

ಪಂಜಾಬಿಗೆ ಹಾಲು ಸೇವನಾ ಪ್ರಶಸ್ತಿ

ಭಾರತದಲ್ಲಿ ತಲಾ ಹಾಲು ಸೇವನೆಯ ರಾಜ್ಯಗಳಲ್ಲಿ ಪಂಜಾಬಿಗೆ ಪ್ರಥಮ ಸ್ಥಾನ ದೊರೆತಿದೆ – ಇಲ್ಲಿ ಪ್ರತಿದಿನ 50 ಲಕ್ಷ ಲೀಟರು ಹಾಲು ಉತ್ಪತ್ತಿಯಾಗುತ್ತಿದೆ – 23 ಲಕ್ಷ ಜಾನುವಾರುಗಳಿದ್ದು, ಅವೆಲ್ಲಾ ದೃಢಕಾಯವಾಗಿದ್ದು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹಾಲು ಒದಗಿಸುತ್ತವೆ ಎಂದೂ ವರದಿಯಾಗಿದೆ.

ಕಾಡುಕತ್ತೆಗಳ ಸಂರಕ್ಷಣೆ ಪ್ರಯತ್ನ

ನವದೆಹಲಿ— ಕಚ್ ಮರಳುಕಾಡಿನಲ್ಲಿ ಸುತ್ತಾಡುತ್ತಿರುವ ಮತ್ತು ಈಗ ಕ್ಷೀಣವಾಗುತ್ತಿರುವ ಜಾತಿಯ ಕಾಡುಕತ್ತೆಗಳಿಗೆ ಸೌರಾಷ್ಟ್ರದಲ್ಲಿ ಒಂದು ಪ್ರಾಣಿ ಧಾಮ ಏರ್ಪಡಿಸಲಾಗುವುದೆಂದು ಗೌರ್ನರರ ಸಲಹೆಗಾರ ಶ್ರೀ ಸಾರಿನ್‌ರವರು ಹೇಳಿದರು – ಈಗ ಇರುವ ಈ ಜಾತಿಯ 350 ಪ್ರಾಣಿಗಳ ಸಂರಕ್ಷಣೆ ಮಾಡಲಾಗುವದು – 25 ವರ್ಷಗಳ ಹಿಂದೆ ಈ ಪ್ರಾಣಿಗಳು 4000 ದಿಂದ 4500 ರವರೆಗೆ ಇದ್ದವು.

ದಿವ್ಯವಾಣಿ

ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸುವವರ ಶ್ರಮ ವ್ಯರ್ಥ. — ಲಾಟಿನ್‌ಗಾದೆ

ಕಪ್ಪೆ ರಫ್ತಿಸಿ

ನವದೆಹಲಿ— ದೇಶದಲ್ಲಿ ಸಿಕ್ಕಾಪಟ್ಟೆ ಕಪ್ಪೆ ಹಿಡಿಯುತ್ತಿರುವ ಬಗ್ಗೆ ಲೋಕ ಸಭೆಯಲ್ಲಿ ಸದಸ್ಯರು ಕಳವಳ ವ್ಯಕ್ತಪಡಿಸಿದರು – ವಿದೇಶೀ ವಿನಿಮಯಕ್ಕಾಗಿ ಕಪ್ಪೆಗಳನ್ನು ಕೊಲ್ಲುತ್ತಿರುವುದು ತಪ್ಪೆಂದು ತಿಳಿಸಿದರು.

ಗೋಧನವೇ ನಮ್ಮ ಸಂಪತ್ತು

4

ಗೀತಾ ಮಾತೆ

★

ಏಕಮಾತೃನೆದೆಯ ಮಾತೃಸ ಸರೋವರದಿಂದ
ಜಾರಿದು ಬಂದಿದ್ದೈತ ಗಂಗೆ ನೀನು !
ಧರನೆದೆಯ ಭೀತಿ ವ್ಯಾಕುಲತೆ ಜಡತೆಯ ತೊಳೆದು
ಜೀವಗಿಡುಜ್ವಲ ಚಂತೆ ತುಂಗೆ ನೀನು !

ಭಾರತದ ಸಂಸ್ಕೃತಿಗೆ ಹಿಡಿದ ನಂದಾ ದೀಪ
ಉಪನಿಷದ್ವೇದ ಸಾರದ ಪೂರ್ಣಕುಂಭ !
ಯುಗಯುಗದ ಪುಣ್ಯಲತೆ ಬಿಟ್ಟ ಸತ್ಫಲ ನೀನು
ಭಾರತಾಂಬೆಯ ಹೃದಯದಮಲ ಪ್ರತಿಬಿಂಬ !

ಈ ಜಗದ ಬಂಧುತ್ವ ನಶ್ವರದ ಸುಖಸಿರಿಗೆ
ಮರುಳಾಗಿ ಕಡೆಗಣಿಸಿ ಆತ್ಮತತ್ವ !
ಕರ್ಮಭೀರುಗಳಾಗಿ ಕರ್ತವ್ಯವನೆ ಮರೆತು
ನಡುಗಿರಲು ಲೌಕಿಕತೆ ಅರಿಯದಮರತ್ವ !

ಕಪ್ಪು ಕವಿದೆದೆಯಲ್ಲಿ ಜ್ಞಾನದೀಪ್ತೋಜ್ವಲತೆ
ತುಂಬಿ ಬೆಳಗಿದೆ ಮನದ ಮೂಲೆ ಮೂಲೆ !
ಪುಳಕಗೊಂಡೆದೆಯುಬ್ಬಿ ಸ್ಪುರಿಸಿ ರೋಮಾಂಚನಕೆ
ಪುರುಷಧರ್ಮವು ನೈಜರೂಪತಾಳಿ !

ವಿಶ್ವರೂಪ ವಿರಾಟ ಕೋಟಿ ಸೂರ್ಯಪ್ರಭೆಗೆ
ನಾನೆಂಬ ಮೋಂಬತ್ತಿ ಮಂಕಾಗಿ ಕರಗಿ !
ಸ್ವಾರ್ಥಬಿಂದು ಪರಾರ್ಥ ಸಿಂಧುಮಯನಾದಾಗ
ಅಳಿವೊಡಲ ವೈರಿಗಳ ನಾಶಹಾಗೆ !

ಸೂತ್ರಧಾರಿಯ ಕೈಯ ಜಡಬೊಂಬೆ ಹಗುರಾಗಿ
ಉನ್ನತಿಯ ಮೆಟ್ಟಿಲನು ಹತ್ತುತಿತಲು !
ನನ್ನ ನಿನ್ನಯ ಬದಲು ಅವನ ಕೈವಾಡವನೆ
ದಿಕ್ಕು ದಿಕ್ಕುಗಳೆಲ್ಲ ತೋರುತಿರಲು !

ಧರ್ಮ ಸಂರಕ್ಷಣೆಯ ಯಜ್ಞದೀಕ್ಷೆಯ ತಳೆಯೆ
ಧ್ವನಿಯು ಸಾಗಿತು ಜ್ಞಾನ ಪೀಯೂಷವಾಗಿ !
ಶಿಷ್ಟಪಾಲನೆಯೋಗ ಫಲವಾಗಿ ಅವತರಿಸೆ
ಲೋಕಶಾಂತಿಗೆ ಭವ್ಯ ನಾಂದಿಯಾಗಿ !

— ಮಜಬೈಲು ಭಾಸ್ಕರ ಭಂಡಾರಿ [ವಿಕ್ರಮ]

ದಿವ್ಯವಾಣಿ

ನೀವು ಏನಾದರೂ ಪ್ರಯೋಜನ ಮಾಡಿದರೆ ಅದನ್ನು ಎಂದೂ ಜ್ಞಾಪಿಸಿಕೊಳ್ಳಬೇಡಿ ; ನೀವು ಏನಾದರೂ ಪ್ರಯೋಜನ ಪಡೆದರೆ ಅದನ್ನು ಎಂದೂ ಮರೆಯಬೇಡಿ.

— ಚಿಲೋನ್

ಜನಪ್ರಿಯವಾಗುತ್ತಿರುವ ಸಗಣಿ ಅನಿಲ ಯಂತ್ರ

ಇಂದು ನಮ್ಮ ದೇಶದಲ್ಲಿ ಸಗಣಿ ಅನಿಲ ಯಂತ್ರಗಳು ಪ್ರಮುಖಪಾತ್ರ ವಹಿಸಬೇಕಾಗಿದೆ ; ಈ ಯಂತ್ರಗಳು ಅಡಿಗೆ, ನೀರಾವರಿ ಕಾರ್ಯಕ್ಕೆ ಬಳಸುವ ಪಂಪುಗಳ ಚಾಲನೆಗೆ ಅಗತ್ಯವಾದ ಪರ್ಯಾಯ ಇಂಧನ ಒದಗಿಸುವುದಲ್ಲದೆ ಕೃಷಿ ಭೂಮಿಗೆ ಬೇಕಾದ ಉತ್ತಮ ಗೊಬ್ಬರವನ್ನು ನೀಡುತ್ತದೆ ; ಈಗ ದೇಶಾದ್ಯಂತ ಏಳು ಸಹಸ್ರ ಸಗಣಿ ಅನಿಲಯಂತ್ರಗಳು ಯಶಸ್ವಿಯಾಗಿ ಕಾರ್ಯೋನ್ಮುಖವಾಗಿವೆ.

ಭಾರತದ ಪಶುಸಂಪತ್ತು ಅಪಾರ. 1961 ರ ಗಣತಿಯಂತೆ ದೇಶದಲ್ಲಿ 229 ಕೋಟಿ ಪಶುಗಳಿವೆ : ಇವುಗಳಿಂದ ವರ್ಷಕ್ಕೆ 120 ಕೋಟಿ ಟನ್ ಗಳಿಗಿಂತಲೂ ಹೆಚ್ಚು ಸಗಣಿ ದೊರೆಯುತ್ತದೆ ; ಇದರಲ್ಲಿ 40 ಕೋಟಿ ಟನ್ ಸಗಣಿಯನ್ನು ಬೆರಣಿ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ ; ಈ ಪ್ರಮಾಣದ ಸಗಣಿಯನ್ನು ಗೊಬ್ಬರವಾಗಿ ಬಳಸಿದರೆ ದೇಶದ ಆಹಾರಧಾನ್ಯ ಉತ್ಪಾದನೆ ಒಂದು ಕೋಟಿ ಟನ್ ಹೆಚ್ಚುತ್ತದೆ. ಖಾದಿ ಮತ್ತು ಗ್ರಾಮ ಕೈಗಾರಿಕಾ ಆಯೋಗದ ಸಲಹೆಯಂತೆ ಯೋಜನಾ ಆಯೋಗವು ದೇಶದ ಸುಮಾರು ಎರಡು ಸಹಸ್ರ ಸಗಣಿ ಅನಿಲ ಯಂತ್ರ ಸ್ಥಾಪಿಸಲು ಏರ್ಪಡಿಸಿದೆ.

ವುಡ್‌ಲಾಂಡ್ಸ್ 19 4 74 ರಿಂದ

ಅಮೋಘ ಆರಂಭ

ಪವಿತ್ರ ಪಾಪಿ

ಹಿಂದಿ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ– ತನುಜ ಬಾಲರಾಜ ಸಹಾನಿ ಐ ಎಸ್ ಜೋಹರ್ ಜಯಶ್ರೀ

ಅಪೇರಾ 19 4 74 ರಿಂದ

ಅಡಿವೈಪೆಣ್

ಪಾತ್ರ – ಎಂ ಜಿ ಆರ್ ಜಯಲಲಿತ

ರೋಮಾಂಚಕಾರಿ ತಮಿಳು ವರ್ಣ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Protect the Cow

Help The Gorakshana

— HumanitarianPropogānda Monthly....

Edited Printed and Published by Dharmapracharanirata M S. Krishna Rao (Proprietor) at the Satvvadi Press, Chamarajapuram Mysore